**SC No. 274/2024**
**P.W. 5**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 274/2024 P.W.5**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **17.03.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಎಸ್.ಜಿ.ವಕೀಲರಿಂದ:

ನಾನು ಮೆಡಿಕಲ್ ಡಿಪಾರ್ಟ್ ಮೆಂಟ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಜೆ.ಪಿ.ನಗರದ ಬಯೋಟೆಕ್ ಸರ್ಜಿಕಲ್ ನಲ್ಲಿ ಕೆಲಸ ಮಾಡುತ್ತೇನೆ. ಜೆ.ಸಿ.ಬಿ. ಅನ್ನು ನನ್ನ ತಮ್ಮ ನೋಡಿಕೊಳ್ಳುತ್ತಾನೆ. ನನಗೂ ಅದಕ್ಕೂ ಸಂಬಂಧ ಇಲ್ಲ. ನಮ್ಮ ಸ್ವಂತ ಊರು ಗಿರಿಗೌಡನ ದೊಡ್ಡಿ. ನಾನು ಬೋವಿ ಜಾತಿಯವನು. ಆರೋಪಿತರು ನಮ್ಮ ದೂರದ ಸಂಬಂಧಿಕರು ಎಂದರೆ ಸರಿ. ಆರೋಪಿ ಶಾಂತಕುಮಾರ್ ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ನಾನು ಅವರ ಬಳಿ ಚೀಟಿ ಹಾಕಿ ಅದನ್ನು ಎತ್ತಿಕೊಂಡಿದ್ದೇನೆ ಎಂದರೆ ಸರಿ. ಈ ಘಟನೆ ನಡೆಯುವ ಎರಡು ತಿಂಗಳ ಮೊದಲು ಚೀಟಿ ಎತ್ತಿಕೊಂಡಿದ್ದೆನು. ಚೀಟಿ ತೆಗೆದುಕೊಂಡ ನಂತರ ನಾನು ಹಣ ಕಟ್ಟದೇ ಇರುವುದರಿಂದ ಪೊಲೀಸ್ ಠಾಣೆಗೆ ದೂರು ಹೋಗಿತ್ತು ಎಂದರೆ ನನ್ನ ತಮ್ಮನ ವಿಷಯದಲ್ಲಿ ದೂರು ಹೋಗಿತ್ತು. ನನ್ನ ತಮ್ಮ ಸಹ ಚೀಟಿ ಹಾಕಿದ್ದು, ಆತ ಹಣ ಕಟ್ಟದೇ ಇದ್ದುದರಿಂದ ದೂರು ಹೋಗಿತ್ತು ಎಂದರೆ ಸರಿ. ನಾನು ಸಹ ಹಣ ಕಟ್ಟದೇ ಇದ್ದುದರಿಂದ 2 ನೇ ಆರೋಪಿ ಹಲವಾರು ಬಾರಿ ಕೇಳಿದ್ದು, ಪೊಲೀಸ್ ಠಾಣೆಗೂ ಸಹ ದೂರು ಹೋಗಿತ್ತು ಎಂದರೆ ಸರಿಯಲ್ಲ. ಪೊಲೀಸರು ನೀವು ಒಂದೇ ಊರಿನವರು, ಕೇಸ್ ಬೇಡ, ಹಣದ ವ್ಯವಹಾರವನ್ನು ಬಗೆಹರಿಸಿಕೊಳ್ಳಿ ಎಂದು ಕಳುಹಿಸಿದ್ದರು ಎಂದರೆ ಸರಿ, ಅದು ನನ್ನ ತಮ್ಮನ ವಿಷಯದಲ್ಲಿ. ನಾನು ಪೊಲೀಸ್ ಠಾಣೆಗೆ ಹೋಗಿರಲಿಲ್ಲ, ನನ್ನ ತಮ್ಮ ಬಂದು ವಿಷಯ ತಿಳಿಸಿದನು. ನಾನು ಸಹಾ ಪೊಲೀಸ್ ಠಾಣೆಗೆ ಹೋಗಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2,50,000/- ಲಕ್ಷ ರೂಗಳ ಎರಡು ಚೀಟಿಗಳನ್ನು ನಾನು ಮತ್ತು ನನ್ನ ತಮ್ಮ ಹಾಕಿದ್ದೆವು.

ನಾನು ಚೀಟಿ ಎತ್ತಿದ ನಂತರ 2 ನೇ ಆರೋಪಿಗೆ ಹಣ ಕೊಟ್ಟಿದ್ದ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ. ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹದೇವ್

ನಮ್ಮ ಮನೆಯ ಬಳಿ ವಾಸವಿದ್ದಾರೆ. ನಮ್ಮ ಮತ್ತು ಆರೋಪಿತರ ಮನೆಯ ನಡುವೆ ಅರ್ಧ ಕಿ.ಮೀ ದೂರವಿದೆ. ನಾನು ಮತ್ತು ಮಹದೇವ್ ಒಂದೇ ಶಾಲೆಯಲ್ಲಿ ಓದಿದ್ದು, ಸ್ನೇಹಿತರು ಎಂದರೆ ಸರಿ. ಮಹದೇವ್ ನನಗಿಂತ ದೊಡ್ಡವನು ಆಗಿದ್ದು ಆತನಿಗೆ ಮದುವೆಯಾಗಿಲ್ಲ ಎಂದರೆ ಸರಿ. ನನಗೆ ಮದುವೆಯಾಗಿದೆ. ಮಹದೇವ್ ರೌಡಿ ಶೀಟರ್ ಎಂದರೆ ಸರಿ. ಆತನ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಅದೇ ರೀತಿ Decoity ಯತ್ನ ಮತ್ತು ಇತರೆ ಕೇಸ್ ಗಳು ಇವೆ ಎಂದರೆ ಯಾವ ಕೇಸ್ ಗಳು ಎಂದು ಗೊತ್ತಿಲ್ಲ, ಆದರೆ ಕೇಸ್ ಗಳು ಇವೆ. ಮಹದೇವ್ ಗೆ ಮಧ್ಯಪಾನ ಅಭ್ಯಾಸ ಇದೆ ಎಂದರೆ ಗೊತ್ತಿಲ್ಲ. ನಾನು ಮಧ್ಯಪಾನ ಮಾಡುತ್ತೇನೆ, ಆದರೆ ಮಹದೇವ್ ಮಾಡುವುದಿಲ್ಲ. ಮಹದೇವ್ ನ ಸಂಪೂರ್ಣ ವೈಯಕ್ತಿಕ ವಿಷಯಗಳು ನನಗೆ ಗೊತ್ತಿಲ್ಲ. ಆತ ನನ್ನ ಜೊತೆ ಅಷ್ಟಾಗಿ ಸೇರದೇ ಇರುವುದರಿಂದ ಆತ ಮಧ್ಯಪಾನ ಮಾಡುತ್ತಾನೋ ಇಲ್ಲವೋ ಗೊತ್ತಿಲ್ಲ.

ಮಹದೇವ್ ರವರ ತಂದೆ ದೇವರಾಜ್. ಆತ ಮಧ್ಯಪಾನ ಮಾಡುವುದಿಲ್ಲ. ಮಹದೇವ್ ನ ಮೇಲೆ ಹಲವು ಪ್ರಕರಣ ಇರುವುದರಿಂದ ಮತ್ತು ರೌಡಿಶೀಟರ್ ಆಗಿರುವುದರಿಂದ ಜನರು ಆತನಿಗೆ ಹೆದರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೂ ನಮಗೂ ದಾರಿ ವಿಷಯದಲ್ಲಿ ವೈಶಮ್ಯ ಇದೆ ಎಂದರೆ ಸರಿಯಲ್ಲ. ಹಣದ ವಿಷಯದಲ್ಲಿ ಮಾತ್ರ ವೈಶಮ್ಯ ಇದ್ದು, ಜಮೀನಿನ ಬಗ್ಗೆ ಇಲ್ಲ. ಆರೋಪಿತರ ವಿರುದ್ಧ ಹಣದ ವಿಷಯದಲ್ಲಿ ನನಗೂ ನನ್ನ ತಮ್ಮನಿಗೂ ವೈಶಮ್ಯ ಇರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚುನಾವಣೆಯಲ್ಲಿ ಕೇವಲ ಮತ ಚಲಾಯಿಸಿದ್ದು, ಯಾವುದೇ ಪಕ್ಷದ ಪರ ಇರಲಿಲ್ಲ. ಮಹದೇವ್ ಯಾವ ಪಕ್ಷಕ್ಕೆ ಬೆಂಬಲ ನೀಡಿದ್ದ ಎಂದು ಗೊತ್ತಿಲ್ಲ.

ಪಟ್ಲಮ್ಮ ಚುನಾವಣೆಗೆ ನಿಂತಿದ್ದರು ಎಂದರೆ ಸರಿ. ಅವರು ನಮ್ಮ ಜಾತಿಯವರು ಎಂದರೆ ಸರಿ. ಪಟ್ಲಮ್ಮನಿಗೆ ಮಹದೇವ ಬೆಂಬಲ ನೀಡಿದ್ದ ವಿಷಯ ನನಗೆ ಗೊತ್ತಿಲ್ಲ. ಪಟ್ಲಮ್ಮ ನನ್ನ ಸಂಬಂಧಿ ಎಂದರೆ ಸರಿ. ನಾನು ಸಹ ಪಟ್ಲಮ್ಮರವರಿಗೆ ಬೆಂಬಲ ನೀಡಿದ್ದು, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಟ್ಲಮ್ಮನ ಪರ ಮಹದೇವ್ ಸಂಪೂರ್ಣ ಚುನಾವಣೆ ಜವಾಬ್ದಾರಿ ತೆಗೆದುಕೊಂಡಿದ್ದ ಎಂದರೆ ಗೊತ್ತಿಲ್ಲ. ಪಟ್ಲಮ್ಮ ಚುನಾವಣೆಯಲ್ಲಿ ಸೋತರು ಎಂದರೆ ಸರಿ. ಆರೋಪಿ ಯಶೋಧಮ್ಮ ಚುನಾವಣೆಯಲ್ಲಿ ಗೆದ್ದರು ಎಂದರೆ ಸರಿ. ಯಶೋಧಮ್ಮ ಪಂಚಾಯತಿ ಅಧ್ಯಕ್ಷರು ಎಂದರೆ ಸರಿ. ಪಟ್ಲಮ್ಮ ಸೋತಿದ್ದರಿಂದ ನನಗೆ ಮಹದೇವರವರಿಗೆ ಈಗಲೂ ಆರೋಪಿತರ ವಿರುದ್ಧ ದ್ವೇಷ ಇದೆ ಎಂದರೆ ಸರಿಯಲ್ಲ. ಗಲಾಟೆ ಪ್ರಾರಂಭ

ಆದಾಗ ನಾನು ಅಲ್ಲಿ ಇದ್ದೆ. ನಾನು ಗಲಾಟೆ ಬಿಡಿಸುವ ಪ್ರಯತ್ನ ಮಾಡಲಿಲ್ಲ. ನಾನು ಸ್ಥಳದಲ್ಲಿ ಇರಲಿಲ್ಲ ಮತ್ತು ಅಲ್ಲಿ ಯಾವುದೇ ಗಲಾಟೆ ನಡೆದಿಲ್ಲ ಹಾಗೂ ನಾನು ಬಿಡಿಸಲು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹೊಡೆಯಲು ಬಂದಿದ್ದರಿಂದ ನಾನು ಗಲಾಟೆ ಬಿಡಿಸಲು ಹೋಗಿಲ್ಲ. ಅವರು 15-20 ಜನ ಇದ್ದುದರಿಂದ ನಾನು ಗಲಾಟೆ ಬಿಡಿಸಲು ಹೋಗಿಲ್ಲ. ಆ 15-20 ಜನ ಏನೇನು ಮಾಡುತ್ತಿದ್ದರು ಎಂದು ನನಗೆ ನೋಡಲು ಆಗಲಿಲ್ಲ. ನಾನು ಮಹದೇವನನ್ನು ನೋಡಿದಾಗ ಆತನ ಮೈಮೇಲೆ ಬಟ್ಟೆ ಇತ್ತು. ಆತ ಕಪ್ಪು ಬಣ್ಣದ ಚಡ್ಡಿ ಹಾಕಿದ್ದ. ಆತ ತುಂಬು ತೋಳಿನ ಶರ್ಟ್ ಧರಿಸಿದ್ದ. ಶರ್ಟ್ ಒಂದೇ ಬಣ್ಣದಿತ್ತು.

ನಾನು ಮಾರನೇ ದಿನ ಪೊಲೀಸ್ ಠಾಣೆಗೆ ಹೋಗಿದ್ದೆ. ನಾನು, ಸುರೇಶ್, ಮಹದೇವ್ ರವರ ತಂದೆ ದೇವರಾಜ್, ಮಹೇಶ್ ಮತ್ತು ಸಿದ್ದಪ್ಪ ಪೊಲೀಸ್ ಠಾಣೆಗೆ ಹೋಗಿದ್ದೆವು. ನಾನು ಗಾಡಿಯಲ್ಲೇ ಹೋಗಿ ದೇವರಾಜ್ ನ್ನು ಕರೆದುಕೊಂಡು ಬಂದೆ. ನಾನು 10 ನಿಮಿಷದಲ್ಲಿ ಹೋಗಿ ಕರೆದುಕೊಂಡು ಬಂದೆ. ಆಗ ಮಹದೇವ್ ಹೊಡೆದಿದ್ದ ಜಾಗದಲ್ಲಿ ಕೆಳಗೆ ಬಿದ್ದಿದ್ದು, ಆತನ ಸುತ್ತ ಆರೋಪಿತರು ನಿಂತಿದ್ದರು. ಅಷ್ಟರಲ್ಲಿ 30-40 ಜನ ನಿಂತಿದ್ದರು. ನಾನು ಬಂದು ನೋಡಿದಾಗ ಆರೋಪಿತರು ಮತ್ತು 30-40 ಜನ ಸುಮ್ಮನೆ ನಿಂತಿದ್ದರು. ದಯಾನಂದ ಸಾಗರ್ ಆಸ್ಪತ್ರೆ ಹಾರೋಹಳ್ಳಿ ಯಲ್ಲಿದ್ದು ನಮಗೆ ಹತ್ತಿರವಿದೆ. ಘಟನೆ ನಡೆದ ಜಾಗದಿಂದ ಗಾಯಾಳುವನ್ನು ಸುಮಾರು ಅರ್ಧ ಕಿ.ಮೀ ಕರೆದುಕೊಂಡು ಹೋಗಿ ಅಲ್ಲಿಂದ ಮಣಿಕಂಠ ರವರು ಬುಕ್ ಮಾಡಿದ್ದ ಆಂಬ್ಯುಲೆನ್ಸ್ ನಲ್ಲಿ ಆಸ್ಪತ್ರೆಗೆ ಕಳುಹಿಸಿದೆವು. ಆಂಬ್ಯುಲೆನ್ಸ್ ಸುಮಾರು 11 ಗಂಟೆಗೆ ಬಂದಿತು. 108 ಆಂಬ್ಯುಲೆನ್ಸ್ ಬಂದಿತ್ತು. ನಾವು 3 ಜನ ಆಂಬ್ಯುಲೆನ್ಸ್ ನಲ್ಲಿ ಹೋದೆವು. ಆ ಸಮಯದಲ್ಲಿ ಮಹದೇವ್ ಮೈಮೇಲೆ ಬಟ್ಟೆಗಳು ಇರಲಿಲ್ಲ. ಬಟ್ಟೆಗಳು ಗಲಾಟೆಯ ಜಾಗದಲ್ಲಿ ಬಿದ್ದಿತ್ತು. ಯಾರೂ ಆತನಿಗೆ ಹೊಡೆದಿಲ್ಲ ಮತ್ತು ಬಟ್ಟೆಗಳು ಅಲ್ಲಿ ಬಿದ್ದಿರಲಿಲ್ಲ ಹಾಗೂ ಮನೆಯಲ್ಲಿದ್ದ ಬಟ್ಟೆಗಳನ್ನು ಪೊಲೀಸರಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಪೊಲೀಸರನ್ನು ಕರೆಸುವ ಪ್ರಯತ್ನ ಮಾಡಲಿಲ್ಲ, ನನ್ನ ಸ್ನೇಹಿತರು ಮಾಡಿದರು. ನಾನು ಇದ್ದಾಗ ಪೊಲೀಸರು ಘಟನಾ ಸ್ಥಳಕ್ಕೆ ಬಂದರು. ಇಬ್ಬರು ಪೊಲೀಸರು ಜೀಪ್ ನಲ್ಲಿ ಬಂದರು, ಹೆಸರು ಗೊತ್ತಿಲ್ಲ. ಪೊಲೀಸರು ಸ್ಥಳಕ್ಕೆ 11.30 ಗಂಟೆಗೆ ಬಂದರು. ಪೊಲೀಸರು ಬಂದ ತಕ್ಷಣ ಗಾಯಾಳುವನ್ನು ಕರೆದುಕೊಂಡು ಆಸ್ಪತ್ರೆಗೆ ಹೋದೆವು. ನಾನು, ಸುರೇಶ್, ಮಣಿಕಂಠ, ಮಹೇಶ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ವಾಗ್ವಾದ ಅಲ್ಲಿದ್ದ ಜನರಿಗೂ ಮತ್ತು

ದೇವರಾಜ್ ರವರಿಗೆ ನಡೆಯಿತು. 11.45 ಗಂಟೆಗೆ ಆಸ್ಪತ್ರೆಗೆ ಹೋದೆವು. ಅವರನ್ನು ನೇರವಾಗಿ ತುರ್ತು ಚಿಕಿತ್ಸಾ ವಿಭಾಗಕ್ಕೆ ಕರೆದುಕೊಂಡರು. ಸುಮಾರು 12 ಗಂಟೆಗೆ ಆಸ್ಪತ್ರೆಗೆ ಮಣಿಕಂಠ ಎಂ.ಎಲ್.ಸಿ ಮಾಹಿತಿ ಕೊಟ್ಟನು. ಹಲ್ಲೆಯ ಬಗ್ಗೆ ಹೇಳಿದ್ದು, ಆರೋಪಿತರ ಹೆಸರನ್ನು ಆಸ್ಪತ್ರೆಯಲ್ಲಿ ಹೇಳಿಲ್ಲ. ಆರೋಪಿತರು ಘಟನೆಯಲ್ಲಿ ಭಾಗಿಯಾಗಿಲ್ಲದೇ ಇರುವುದರಿಂದ ಆಸ್ಪತ್ರೆಯಲ್ಲಿ ಅವರ ಹೆಸರು ಹೇಳಿಲ್ಲ ಎಂದರೆ ಸರಿಯಲ್ಲ.

ಮಹದೇವ್ ಡಾಬಾ ನಡೆಸುತ್ತಾನೆ ಮತ್ತು ಹಲವರ ಬಳಿ ಸಾಲ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಸಾಲ ವಾಪಸ್ ಕೊಡದೇ ಅವರಿಗೆ ಧಮ್ಕಿ ಹಾಕುತ್ತಾನೆ ಎಂದರೆ ಸರಿಯಲ್ಲ. ನಾನು ಮಹದೇವ್ ಜೊತೆ ಸೇರಿಕೊಂಡು ಚೀಟಿ ಹಣ ಕಟ್ಟದೇ ಹೆದರಿಸುತ್ತಿದ್ದೆ ಎಂದರೆ ಸರಿಯಲ್ಲ. ಮಹದೇವ್ ರೌಡಿಸಂ ಮಾಡಿಕೊಂಡು ಜೀವನ ನಡೆಸುತ್ತಿದ್ದು ನಾನು ಆತನ ಗ್ಯಾಂಗ್ ಎಂದರೆ ಸರಿಯಲ್ಲ.

ದ್ವಿಚಕ್ರ ವಾಹನದ ಸಂಖ್ಯೆ ನೆನಪಿಲ್ಲ. ನಾನು ಯಾವುದೇ ವಾಹನವನ್ನು ಜಖಂ ಮಾಡಿದ್ದನ್ನು ನೋಡಿಲ್ಲ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ತಿಂಗಳಿಗೆ 15,000/- ರೂ ಸಂಬಳವಿದೆ. 2024 ರಲ್ಲಿ 12,000/- ರೂ ಸಂಬಳ ಬರುತ್ತಿತ್ತು. ನಾನು ಒಂದು ಚೀಟಿಗೆ 10,000/- ರೂ ಕಟ್ಟುತ್ತಿದ್ದೆ. ನನಗೆ 12,000/- ರೂ ಸಂಬಳ ಬರುತ್ತಿದ್ದು, ಪೆಟ್ರೋಲ್ ಖರ್ಚು 4,000-5,000/- ಬರುತ್ತಿತ್ತು ಎಂದರೆ ಸರಿ. ನನಗೆ ಸಂಬಳ ಕಡಿಮೆ ಬರುತ್ತಿದ್ದರಿಂದ ಚೀಟಿ ಕಟ್ಟಲು ಆಗುತ್ತಿರಲಿಲ್ಲ. ನನ್ನ ಸಂಬಳ ವೈಯಕ್ತಿಕ ಖರ್ಚಿಗೆ ಆಗುತ್ತಿತ್ತು ಎಂದರೆ ಸರಿ. ನಾನು ಮಹದೇವ್ ಜೊತೆ ಸೇರಿಕೊಂಡು ರೌಡಿಸಂ ಮಾಡಿ, ಹಣ ವಸೂಲಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಯಶೋಧಮ್ಮನವರು ಪಂಚಾಯತಿ ಅಧ್ಯಕ್ಷ ರಾಗಿದ್ದರಿಂದ ಆ ವೈಶಮ್ಯದಿಂದ ಇಡೀ ಕುಟುಂಬದ ಮೇಲೆ ಸುಳ್ಳು ಕೇಸ್ ಹಾಕಿದ್ದೇವೆ ಎಂದರೆ ಸರಿಯಲ್ಲ. ನನಗೆ ಮತ್ತು ಆರೋಪಿತರ ನಡುವೆ ರಾಜಕೀಯ ವೈಶಮ್ಯ ಇರಲಿಲ್ಲ, ಮಹದೇವ್ ಬಗ್ಗೆ ನನಗೆ ಗೊತ್ತಿಲ್ಲ.

ಘಟನೆ ನಡೆದಿದೆ ಎಂದು ಹೇಳುವ ಸ್ಥಳದಲ್ಲಿ ಸುತ್ತ ಮುತ್ತ ಸುಮಾರು 20 ಮನೆಗಳು ಇವೆ. ಆರೋಪಿತರ ಮೇಲೆ ಇರುವ ದ್ವೇಷದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಯಾವ

**SC No. 274/2024**
**P.W. 5**

ಘಟನೆ ನಡೆದಿಲ್ಲ ಮತ್ತು ಆರೋಪಿತರು ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಬಳಿ ಮೊಬೈಲ್ ಇತ್ತು. ಮಹದೇವ್ ಬಳಿ ಮೊಬೈಲ್ ಇತ್ತೋ ಇಲ್ಲವೋ ಗೊತ್ತಿಲ್ಲ. ದೇವರಾಜ್ ಬಳಿ ಮೊಬೈಲ್ ಇರಲಿಲ್ಲ. ಮಣಿಕಂಠ ಸ್ಥಳದಲ್ಲಿ ಇರಲಿಲ್ಲ. ಆತ ಬಂದಾಗ ಆತನ ಬಳಿ ಮೊಬೈಲ್ ಇತ್ತು. ನನ್ನದು ವಿವೋ ಮೊಬೈಲ್ ಆಗಿದ್ದು, ಸಂಖ್ಯೆ 7899276930 ಇದೆ. ಪೊಲೀಸರು ಯಾವತ್ತೂ ನನ್ನ ಮೊಬೈಲ್ ಕೇಳಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.